ಅಧ್ಯಕ್ಷರು: ನಾರ್ತ್ ಕೆನಾರದಲ್ಲಿ ಹಾಸ್ಪಿಟಲ್ ಬೇಕಾಗಿದೆ. ಅವರು ಕೇಳುತ್ತಿದ್ದಾರೆ. ಯೋಗೀಶ್ ಭಟ್‌ರವರೇ, ನಿಮ್ಮ ತಾಲ್ಲೂಕಿನಲ್ಲಿ ಹಾಸ್ಪಿಟಲ್ ಆಗಬೇಕು. ನನಗೆ ಗೊತ್ತಿದೆ. ಇದೇ ರೀತಿ ಅವಕಾಶ ಕೊಟ್ಟುಕೊಂಡು ಹೋದರೆ ಗುಳದ ಪ್ರಶ್ನೆ ಲಾಪ್ಸ್ ಆಗುತ್ತದೆ. ಇನ್ನು ಮುಂದೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದಂತಹ ಪ್ರಶ್ನೆಗಳಿವೆ. ಅವರಿಗೆ ಮೇಲ್ಕಿನಂತೆ ನಾಲ್ಕು ಪ್ರಶ್ನೆಗಳಿಗೆ ಉತ್ತರ ಕೊಡುವುದಿದೆ. ಆದುದರಿಂದ ಅವುಗಳನ್ನು ನಾಳೆ ತೆಗೆದುಕೊಳ್ಳೋಣ. ಅವರು ಸೆಕ್ರೆಟರಿ ಕೈಯಲ್ಲಿ ಹೇಳಿ ಕಳುಹಿಸಿದ್ದಾರೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ನಗರಾಭಿವೃದ್ಧಿ ಸಚಿವರಾದ ಚಿಮ್ಮನಕಟ್ಟಿಯವರು ಇದ್ದಾರೆ. ಅವರು ಉತ್ತರ ಕೊಡುತ್ತಾರೆ.

ಅಥಣಿ ಪಟ್ಟಣಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ.

266(3240)

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್(ಅಥಣಿ): ಮಾನ್ಯ ಮುಖ್ಯಮಂತ್ರಿಯವರು ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಅಥಣಿ ಪಟ್ಟಣಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಯಾವ ಸಾಲಿನಲ್ಲಿ ಪ್ರಾರಂಭವಾಯಿತು: ಸೂಕ್ತ ಪ್ರಸ್ತಾವನೆಗಳೊಂದಿಗೆ ಸರ್ಕಾರಕ್ಕೆ ಯಾವಾಗ ಸಲ್ಲಿಸಲಾಯಿತು.

2. ಜಲ ಮಂಡಲಿಯು ತಾಂತ್ರಿಕ ಮಂಜೂರಾತಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ ಯಾವುದು? ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು ಯಾವಾಗ? (ಪ್ರಸ್ತಾವನೆಯಿಂದ ಹಿಡಿದು ಮಂಜೂರಾತಿಯವರೆಗೆ ಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಯವರು):

1. 2000-2001ನೇ ಸಾಲಿನಲ್ಲಿ ಪ್ರಸ್ತಾವನೆಯನ್ನು ತಯಾರಿಸಲಾಯಿತು. ಈ ಪ್ರಸ್ತಾವನೆಯನ್ನು ದಿನಾಂಕ 26.5.2001ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

2. ಪ್ರಸ್ತಾವನೆಯನ್ನು ದಿನಾಂಕ 26.5.2001ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪದರು ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ 54 ಯುಡಬ್ಲ್ಯುಎಸ್ 2001 ದಿನಾಂಕ 30.6.2001ರಲ್ಲಿ ರೂ.444.84 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ

ನೀಡಲಾಗಿದೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಮಾನ್ಯ ಅಧ್ಯಕ್ಷರೆ, ಅಥಣಿ ಪಟ್ಟಣದ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಪ್ರಸ್ತಾವನೆಯನ್ನು ನಗರಸಭೆಯಿಂದ ಯಾವಾಗ ಸಲ್ಲಿಸಲಾಯಿತು ಮತ್ತು ಕರ್ನಾಟಕ ಜಲಮಂಡಲಿಯಿಂದ ಈ ಪ್ರಸ್ತಾವನೆ ಯಾವಾಗ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಯಿತು? ಅದರ ಬಗ್ಗೆ ವಿವರಗಳನ್ನು ಹೇಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) ಮುಖ್ಯ ಮಂತ್ರಿಗಳ ಪರವಾಗಿ: ಅಥಣಿ ಪಟ್ಟಣಕ್ಕೆ ಸುಮಾರು 444.84 ಲಕ್ಷ ರೂಪಾಯಿಗೆ ದಿನಾಂಕ 30.6.2001ರಂದು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಅದಕ್ಕೆ ಪ್ರಸ್ತಾವನೆಯನ್ನು ದಿನಾಂಕ:26.5.2001ರಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರ ಇದರ ತೀವ್ರತೆಯನ್ನು ಪರಿಗಣಿಸಿ ಅಥಣಿ ಪಟ್ಟಣಕ್ಕೆ ಕುಡಿಯುವ ನೀರಿನ ಅನುಕೂಲತೆ ಹೆಚ್ಚಾಗಬೇಕೆಂದು ಹೇಳಿ, ಅಲ್ಲಿನ ಶಾಸಕರ ಒತ್ತಾಯದ ಮೇರೆಗೆ ಮಂಜೂರಾತಿಯನ್ನೂ ಕೂಡ ನೀಡಿದ್ದೇವೆ. ಅದೇ ರೀತಿ ಟೆಂಡರ್ ಕರೆದು ಆದಷ್ಟು ಬೇಗ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಅಥಣಿ ನಗರಕ್ಕೆ ಈಗಿರುವಂತಹ ಕುಡಿಯುವ ನೀರಿನ ಯೋಜನೆ 1964ರಲ್ಲಿ ಮಂಜೂರಾಗಿ ಸುಮಾರು 30 ವರ್ಷಗಳ ಹಿಂದೆ ಅನುಷ್ಠಾನಕ್ಕೆ ಬಂದಿತ್ತು. ತದನಂತರ ಅಲ್ಲಿ ಶಾಂತಿ ನಗರ, ಉದ್ಯಾನಗರ, ಉತ್ತರಪುರಂ ಹಾಗೂ ಶಂಕನಗರ ಬಡಾವಣೆಗಳು ಹುಟ್ಟಿಕೊಂಡು ಸುಮಾರು ಮೂರು ಪಟ್ಟು ಜನಸಂಖ್ಯೆ ಹೆಚ್ಚಿಗೆಯಾಗಿ ಕುಡಿಯುವ ನೀರಿನ ಕೊರತೆ ಬಂದನಂತರ, 10 ವರ್ಷಗಳಿಂದ ಎರಡನೆ ಹಂತದ ಕುಡಿಯುವ ನೀರಿನ ಯೋಜನೆ ಜಾರಿಗೆ ತರಬೇಕೆಂದು ಒತ್ತಾಯ ಇತ್ತು. ಈ ದಿಸೆಯಲ್ಲಿ ನಾವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಾಗ, ಅದು ದಿನಾಂಕ 26.5.2001ರಂದು ಸರ್ಕಾರದ ಮುಂದೆ ಪ್ರಸ್ತಾವನೆ ಬಂದು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರಿಗೆ ಈ ಯೋಜನೆಯನ್ನು ಆದಷ್ಟು ಬೇಗ ಮಂಜೂರು ಮಾಡಿ ಕಾರ್ಯಗತಗೊಳಿಸಬೇಕೆಂದು ವಿನಂತಿ ಮಾಡಿಕೊಂಡಿದ್ದೆ. ಅದಕ್ಕೆ 4.50 ಕೋಟಿ ರೂಪಾಯಿಗೆ ಕೇವಲ 35 ದಿವಸಗಳಲ್ಲಿ ಮಂಜೂರು ಮಾಡಿ ಕೊಟ್ಟಿರುವುದಕ್ಕೆ ಅಥಣಿ ಪಟ್ಟಣದ ಸಮಸ್ತ ನಾಗರೀಕರ ಪರವಾಗಿ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಸರ್ಕಾರಕ್ಕೆ ಹಾಗೂ ಇಲಾಖೆಗೆ ಸಲ್ಲಿಸುತ್ತೇನೆ. ಸರ್ಕಾರ ಯಾವ ರೀತಿ ಜನರಿಗೆ ಸ್ಪಂದಿಸುತ್ತದೆ ಎನ್ನುವುದಕ್ಕೆ ಕೈಗನ್ನಡಿಯಾಗಿದೆ ಅದಕ್ಕೆ ಅಭಿನಂದನೆಗಳು.

ತುಂಗಾಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ.